ಶ್ರೀ ಬಿ. ಬಸವಲಿಂಗಪ್ಪ—ಭೂ ದಾನ ಯಜ್ಞಕ್ಕೆ ಸಂಬಂಧಿಸಿದ ಜಮೀನುಗಳ ವಿಚಾರ ಒಂದು ಕಥೆ ಯಾಗಿದೆ. ಏನೇನು ಕೊಟ್ಟಿದ್ದಾರೆ ಅವು ಯಾವುವು ವ್ಯವಸಾಯ ಮಾಡಲಿಕ್ಕೆ ಯೋಗ್ಯವಾಗಿಲ್ಲ. ಒಟ್ಟಿನಲ್ಲಿ ಲೆಕ್ಕದಲ್ಲಿ ಇವೆ, ಅವು ಹೇಗಿದ್ದವೋ ಹಾಗೆಯೇ ಇವೆ. ಸುಮಾರು ೧೭ ಸಾವಿರ ಎಕರೆಯಲ್ಲಿ ಆರೂವರೆ ಸಾವಿರ ಎಕರೆ ಜಮೀನು ಗುಡ್ಡ, ಕಲ್ಲು ಮಣ್ಣಿನಿಂದ ಕೂಡಿದ್ದು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಯಾರು ಯಾರು ಭೂ ದಾನ ಯಜ್ಞಕ್ಕೆ ಜಮೀನುಗಳನ್ನು ಕೊಟ್ಟಿದ್ದರೋ ಅವರವರ ಸ್ವಾಧೀನದಲ್ಲಿಯೇ ಇವೆ, ಇದಕ್ಕೆ ಗೇಣಿ ಶಾಸನ ಅನ್ವಯ ಆಗುವುದಿಲ್ಲ. ಅಂತರ ಪಿಶಾಚಿ ರೀತಿ ಹಾಗೆಯೇ ಇವೆ.

ಶ್ರೀ ಎಸ್. ಗೋವಿಂದ ಗೌಡ—ಈಗ ಈ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಎಲ್ಲಾ ಗುಡ್ಡಗಾಡು ಪ್ರದೇಶಗಳು ಇಲ್ಲ, ಉತ್ಪತ್ತಿ ಬರತಕ್ಕ ಜಮೀನುಗಳು ಇವೆ.

ಶ್ರೀ ಬಿ. ಬಸವಲಿಂಗಪ್ಪ—ಇದಕ್ಕೆ ಒಂದು ಬೋರ್ಡ್ ಇದೆ. ಆ ಬೋರ್ಡಿಗೆ ನಾನೇ ಚೇರ್ಮನ್ ಅಂತ ಹೇಳುತ್ತಾರೆ, ಬೋರ್ಡ್ ನಾನು ನೋಡಿಯೇ ಇಲ್ಲ. ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡಿ ತಮ್ಮ ಸಲಹೆಯನ್ನು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

Providing employments to unemployed persons at proposed H.M.T Factory, Tumkur.

505. SRI K. H. RAMAKRISHNAIAH (Turvekere)—Will the Minister for Industries and Commerce be pleased state ;—

whether Government have taken action to provide employment to the unemployed of Tumkur District only in the proposed HMT Watch Factory Unit at Tumkur ?

SRI AZEEZ SAIT (Minister for Industries and Commerce)—

A condition has been imposed that the unit should provide employment, the sons of the soil only upto a salary of Rs. 1,000.

ಶ್ರೀ ಕೆ. ಹೆಚ್. ರಾಮಕೃಷ್ಣಯ್ಯ—ನಾನು ಕೇಳಿದ ಪ್ರಶ್ನೆಗೆ ಮಣ್ಣಿನ ಮಕ್ಕಳಿಗೆ ಕೆಲಸ ಕೊಡಲಾಗವುದು ಎಂದು ಹೇಳಿದ್ದೀರಿ ಈಗಾಗಲೇ ಅಲ್ಲಿ ಕೇರಳದವರಿಗೆ ಮತ್ತು ತಮಿಳುನಾಡಿನವರಿಗೆ ಕೆಲಸ ಒದಗಿಸುವಂತಹ ವ್ಯವಸ್ಥೆ ನಡೆಯುತ್ತಿದೆ. ತುಮಕೂರು ಜಿಲ್ಲೆಯ ನಿರುದ್ಯೋಗಿಗಳ ಗತಿ ಏನಂ ಸ್ವಾಮಿ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ—ಕರ್ನಾಟಕದ ಮಣ್ಣಿನ ಮಕ್ಕಳು ಎಂದರೆ ತುಮಕೂರು ಜಿಲ್ಲೆಯವರಷ್ಟೇ ಎಂದು ಅರ್ಥವಿಲ್ಲ. ಲೋಕಲ್ ಎಂಪ್ಲಾಯ್‌ಮೆಂಟ್ ಕೊಡಬೇಕು ಎನ್ನುವ ಬಗ್ಗೆ ಈಗಾಗಲೇ ಚೀಫ್ ಸೆಕ್ರೆಟರಿಯವರ ಜೊತೆಯಲ್ಲಿ ಮಿಟಿಂಗ್ ಮಾಡಿ ಸಾವಿರ ರೂಪಾಯಿಗಳ ಒಳಗೆ ಬರತಕ್ಕಂಥವರಿಗೆ ಅಲ್ಲಿ ಕೆಲಸ ಕೊಡಬೇಕೆಂದು ತೀರ್ಮಾನ ಮಾಡಿರುತ್ತೇವೆ. ತುಮಕೂರು ಜಿಲ್ಲೆ ಒಂದರಲ್ಲೇ ತೆಗೆದುಕೊಳ್ಳಬೇಕೆಂದರೆ ಬಹಳ ಕಷ್ಟವಾಗುತ್ತದೆ. ಕರ್ನಾಟಕದ ಎಲ್ಲ ಜಿಲ್ಲೆಯವರಿಗೂ ಇದು ಅನ್ವಯಿಸುತ್ತದೆ.

ಶ್ರೀ ಕೆ. ಹೆಚ್. ರಾಮಕೃಷ್ಣಯ್ಯ—ಈ ಘಟಕವನ್ನು ಪ್ರಾರಂಭ ಮಾಡಬೇಕಾದರೆ ಸರ್ಕಾರದವರು ಷರತ್ತನ್ನು ಹಾಕಿರುತ್ತಾರೆ. ತುಮಕೂರು ಜಿಲ್ಲೆ ೨೪–೨೮ ಇಂಚು ಮಳೆ ಬೀಳತಕ್ಕಂಥ ಪ್ರದೇಶವಾಗಿದ್ದು ಕ್ಷಾಮ ಡಾಮರಗಳಿಗೆ ಆಗಿದಾಗ್ಗೆ ತುತ್ತಾಗಿ ಅಲ್ಲಿಯ ಜನಕ್ಕೆ ಕಷ್ಟ ನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಆ ಪ್ರದೇಶದ ಮಕ್ಕಳಿಗೆ ಉದ್ಯೋಗವನ್ನು ಕೊಡಬೇಕು ಎನ್ನುವ ಒಂದು ಉದ್ದೇಶದಿಂದಲೇ ಈ ಒಂದು ಘಟಕವನ್ನು ಪ್ರಾರಂಭ ಮಾಡುತ್ತಿರುವುದೇ ವಿನಹ ಬೇರೆ ಕಡೆಯಿಂದ

ಅಂದರೆ ತಮಿಳುನಾಡು, ಕೇರಳದಿಂದ ಬಂದಂಥವರಿಗೆ ಕೆಲಸಗಳನ್ನು ಕೊಡಬೇಕೆಂದಲ್ಲ. ಆದ್ದರಿಂದ ಖಚಿತವಾಗಿ ಯಾವ ಉದ್ದೇಶಕ್ಕಾಗಿ ಈ ಫ್ಯಾಕ್ಟರಿಯನ್ನು ಪ್ರಾರಂಭ ಮಾಡುತ್ತಿರುವರೋ ಆ ಉದ್ದೇಶವನ್ನು ಸರ್ಕಾರದವರು ನೇರವೇರಿಸುವಂಥಹ ಭರವಸೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ—ತುಮಕೂರು ಜಿಲ್ಲೆ ಬಹಳ ಹಿಂದುಳಿದ ಜಿಲ್ಲೆ ಎಂದು ಈ ಫ್ಯಾಕ್ಟರಿಯನ್ನು ೩೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ತಮಿಳುನಾಡು ಮತ್ತು ಬೇರೆ ಕಡೆಯವರಿಗೆ ಕೊಡಬೇಕೆಂದು ಇಲ್ಲ. ಕರ್ನಾಟಕದವರಿಗೇ ಕೊಡಬೇಕೆಂದು ಷರತ್ತುಗಳನ್ನು ಹಾಕಿರುತ್ತೇವೆ. ಅದರಲ್ಲಿ ತುಮಕೂರು ಜಿಲ್ಲೆಯವರಿಗೆ ಪಿಫರೆನ್ಸ್ ಕೊಡಲಾಗುತ್ತದೆ.

ಶ್ರೀ ಕೆ.ಹೆಚ್. ರಾಮಕೃಷ್ಣಯ್ಯ—ತಾವು ಷರತ್ತನ್ನು ಹಾಕುವಾಗ ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಸಂಬಳ ಬರತಕ್ಕಂಥ ಮಣ್ಣಿನ ಮಕ್ಕಳಿಗೇ ಒದಗಿಸಬೇಕೆಂದು ಷರತ್ತನ್ನು ಹಾಕಿರುತ್ತೀರಿ ಅಂದರೆ ಒಂದು ಸಾವಿರಕ್ಕಿಂತ ಹೆಚ್ಚಿಗೆ ಸಂಬಳವನ್ನು ಪಡೆಯತಕ್ಕಂಥ ಮಣ್ಣಿನ ಮಕ್ಕಳು ಈ ರಾಜ್ಯದಲ್ಲಿ ಇಲ್ಲವೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ—ಸಾವಿರ ರೂಪಾಯಿ ಸಂಬಳಕ್ಕೆ ಮೇಲ್ಪಟ್ಟು ಬರತಕ್ಕಂಥ ಹುದ್ದೆಗಳೇನೆಂದರೆ ಟೆಕ್ನಿಕಲ್ ಪೋಸ್ಟ್‌ಗಳು ಇರುತ್ತವೆ. ಇದು ಆಲ್ ಇಂಡಿಯಾ ಫ್ಯಾಕ್ಟರಿಯಾಗಿರುವುದರಿಂದ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಬರತಕ್ಕಂಥ ಹುದ್ದೆಗಳನ್ನು ಅವರೇ ಇಂಟರ್‌ವ್ಯೂ ಕರೆದು ಕೆಲಸಕ್ಕೆ ತೆಗೆದುಕೊಳ್ಳುವುದು ಇರುತ್ತದೆ, ತುಮಕೂರು ಜಿಲ್ಲೆಯೇ ಅಲ್ಲ, ಕರ್ನಾಟಕದಲ್ಲಿ ಎಲ್ಲಿಯೇ ಆಗಲಿ ಸೂಕ್ತ ತಾಂತ್ರಿಕಜ್ಞರು ದೊರತರೆ ಅವರಿಗೇನೆ ಕೊಡುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಹೇಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್—ಮಣ್ಣಿನ ಮಕ್ಕಳು ಎಂದು ಹೇಳಿದಿರಲ್ಲ ಮಣ್ಣಿನ ಮಕ್ಕಳು ಎಂದರೆ ಯಾರು, ರೈತರ ಮಕ್ಕಳಿಗೂ ಮತ್ತು ಹೆಚ್.ಎಂ.ಟಿ.ಗೂ ಸಂಬಂಧವೇನು. ಈ ಒಂದು ಕಂಡೀಷನ್ ಹಾಕಬೇಕಾದರೆ ರೈತರ ಮಕ್ಕಳು ಎಂದು ಹೇಳಲಿಲ್ಲ. ಮಣ್ಣಿನ ಮಕ್ಕಳು ಎಂದರೆ ವ್ಯವಸಾಯ ಮಾಡತಕ್ಕಂಥ ರೈತರ ಮಕ್ಕಳೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ—ವ್ಯವಸಾಯ ಮಾಡತಕ್ಕಂಥವರು ಎಂದರೆ ಎಲ್ಲ ಜಾತಿಯಲ್ಲಿಯೂ ಬರುತ್ತಾರೆ. ರೈತರು ಎಂದರೆ ಎಲ್ಲ ಜಾತಿಯವರು ಅದರಲ್ಲೂ ಬರುತ್ತಾರೆ.

ಶ್ರೀ ಮಳ್ಳೂರು ಆನಂದರಾವ್—ಇದರಲ್ಲಿ ಜಾತಿ ಪ್ರಶ್ನೆ ಬರುವುದಿಲ್ಲ. ರೈತರ ಮಕ್ಕಳಿಗೆ ಮೀಸಲಾಗಿಟ್ಟಿದ್ದೀರಾ ಎಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ—ಈ ಫ್ಯಾಕ್ಟರಿಯಲ್ಲಿ ಸ್ಥಳೀಯರಿಗೆ ಅವಕಾಶವನ್ನು ಕೊಡಬೇಕೆಂದು ಹೇಳಿರುವುದರಿಂದ ಕರ್ನಾಟಕದ ಎಲ್ಲ ಪ್ರದೇಶದ ಜನರಿಗೂ ಇದು ಅನ್ವಯಿಸುತ್ತದೆ. ಬೇರೆ ರಾಜ್ಯಗಳು ಅಂದರೆ ತಮಿಳುನಾಡು ಕೇರಳದವರಿಗೆ ಕೆಲಸವನ್ನು ಕೊಡುತ್ತಿರುತ್ತಾರೆ ಎನ್ನುವ ಗಲಾಟೆ ಇರುವುದರಿಂದ, ಕರ್ನಾಟಕದವರಿಗೇನೇ ಕೊಡಬೇಕು ಎನ್ನುವ ಷರತ್ತನ್ನು ಹಾಕಿದ್ದೇವೆ.

ಶ್ರೀ ವಿ. ಮಸಿಯಪ್ಪ— ಬೇರೆ ಬೇರೆ ಕೈಗಾರಿಕೆಗಳಿಂದ ಆಗಿರತಕ್ಕಂಥ ಅನುಭವದಿಂದ ನಾವು ತಿಳಿದುಕೊಂಡಿರತಕ್ಕಂಥಾದ್ದು ಏನು ಎಂದರೆ ಹೆಡ್ ಆಫ್ ದಿ ಇನ್‌ಸ್ಟಿಟೂಟ್ ಯಾರನ್ನು ಹಾಕುತ್ತಾರೆ ಅವರು ಸಾಧ್ಯವಾದಮಟ್ಟಿಗೂ ಅವರ ಸಂಬಂಧಿಕರನ್ನೇ ತೆಗೆದುಕೊಳ್ಳತಕ್ಕಂಥ ಒಂದು ವಾಡಿಕೆ ನಡೆದು ಬಂದಿರುತ್ತದೆ. ಬೆಂಗಳೂರಿನ ಸುತ್ತಮುತ್ತಲೂ ಇರತಕ್ಕಂಥ ಕೈಗಾರಿಕೆಗಳಲ್ಲಿ ಈ ರೀತಿ ಆಗುತ್ತಾ ಇದೆ, ಆದ್ದರಿಂದ ಇದನ್ನು ತಪ್ಪಿಸಿ ಎಲ್ಲ ಜನರಿಗೂ ಈ ಸೌಲಭ್ಯ ಸಿಕ್ಕತಕ್ಕಂಥ ರೀತಿಯಲ್ಲಿ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದು ಕೊಳುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ—ಹೆಚ್.ಎಂ.ಟಿ. ಮುಂತಾದ ಕೇಂದ್ರ ಸರ್ಕಾರಕ್ಕೆ ಸೇರಿದಂಥ ಫ್ಯಾಕ್ಟರಿಗಳು ಏನು ಇರುತ್ತದೆ. ಆದೆಲ್ಲ ಅವರ ಅಧೀನಕ್ಕೆ ಸೇರಿರುವುದರಿಂದ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನ್ನು ನೇಮಕ ಮಾಡುವುದು ಅವರಿಗೆ ಸಂಬಂಧಪಟ್ಟದ್ದಾಗಿರುತ್ತದೆ ಎಂದು ಹೇಳುತ್ತೇನೆ.